ದಿಃ 08.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಖ್ಯ ವಿಚಾರಣೆಃ ಶ್ರೀ ಬಿ.ಬಿ.ಕೆ ವಕೀಲರಿಂದ ಅರ್ಜಿದಾರರ ಪರವಾಗಿ

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ಪಾಟೀ ಸವಾಲು ಶ್ರೀ ಕೆ.ಎಂ.ಪಿ ವಕೀಲರಿಂದ ಎದುರುದಾರರ ಪರವಾಗಿ

2. ಪಾಟೀ ಸವಾಲಿಗಾಗಿ ಕಾಲವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 02.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

<u>ಪಾಟೀ ಸವಾಲು ಶ್ರೀ ಕೆ.ಎಂ.ಪಿ ವಕೀಲರಿಂದ ಎದುರುದಾರರ ಪರವಾಗಿ</u>

3. ನಾನು 4 ನೇ ತರಗತಿಯವರೆಗೆ ಕಲಿತಿದ್ದೇನೆ. ನನಗೆ ಯಾವ ಭಾಷೆಯಲ್ಲಿ ಬರೆದಿದ್ದನು ಸಹ ಓದಿ ತಿಳಿದುಕೊಳ್ಳಲು ಬರುವುದಿಲ್ಲ. ದಾಖಲೆಗಳಲ್ಲಿ ಬರೆದಿದ್ದನು ಬೇರೆಯವರ ಮೂಲಕ ನಾನು ತಿಳಿದುಕೊಳ್ಳುತ್ತೇನೆ ಎಂದರೆ ಸರಿ. ದಾಖಲೆಗಳಲ್ಲಿ ಬರೆದಿದ್ದನು ತಿಳಿದುಕೊಳ್ಳಲು ಮೂಡಿಗೆರೆಯಲ್ಲಿರುವ ನನ್ನ ತಮ್ಮ ರವಿರವರನ್ನು ಕರೆದುಕೊಂಡು ಹೋಗುತ್ತೇನೆ. ವಜಾ ಆಗಿರುವ Misc. 1/2021 ರ ಅರ್ಜಿಯನ್ನು ನಾನು ದಿನಾಂಕ 23.12.2020 ರಂದು ನ್ಯಾಯಾಲಯಕ್ಕೆ ದಾಖಲಿಸಿದ್ದೆ ಎಂದರೆ ಸರಿ. Misc. 1/2021 ರ ಅರ್ಜಿಗೆ ಸಂಬಂಧಿಸಿದಂತೆ ವಕೀಲರನ್ನು ನಾನು ಕಾಣುತ್ತಿದ್ದೆ. ದಿನಾಂಕ 11.01.2021 ಕ್ಕೂ ಮುಂಚೆ 2 ಬಾರಿ ನಾನು ವಕೀಲರನ್ನು ಕಂಡಿದ್ದೆ. ವಕೀಲರನ್ನು ಬೇಟಿ ಮಾಡಿದ ದಿನಾಂಕ ಹೇಳಲು ಆಗುವುದಿಲ್ಲ. ನಾನು ಮೊಬೈಲ್ ಇಟ್ಟುಕೊಂಡಿಲ್ಲ. ಮೊಬೈಲ್ ಮೂಲಕ ವಕೀಲರನ್ನು ಸಂಪರ್ಕಿಸುತ್ತೇನೆ ಎಂದು ನಾನು ಹೇಳಿಲ್ಲ.

4. ಗಬ್ ಗಲ್ ಎಸ್ಟೇಟ್ ನಲ್ಲಿ ದೂರವಾಣಿ ಸಂಪರ್ಕ ಇದೆ ಎಂದರೆ ಸರಿ. ಗಬ್ ಗಲ್ ಎಸ್ಟೇಟ್ ನಲ್ಲಿರುವ ಕಚೇರಿಗೆ ಹೋಗಿ ಯಾರಿಗಾದರೂ ಕರೆ ಮಾಡಲು ಬಯಸಿದರೆ ಸಂಖ್ಯೆಯನ್ನು ನೀಡಿದರೆ ಕಚೇರಿಯವರು ಮಾತನಾಡಲು ಕರೆ ಮಾಡಿಸಿಕೊಡುತ್ತಾರೆ ಎಂದರೆ ಸರಿ. ನ್ಯಾಯಾಲಯಕ್ಕೆ ಹಾಜರಾಗುವ ದಿನಾಂಕ 11.10.2021 ರ ದಿನಾಂಕವನ್ನು ತಿಳಿದುಕೊಂಡು ನಾನೇ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದೆ ಎಂದರೆ ಸರಿ. Misc 1/2021 ರ ಅರ್ಜಿಯಲ್ಲಿ ನನ್ನ ವಿಚಾರಣೆ ಆಗಿತ್ತು ಎಂದರೆ ಸರಿ. ದಿನಾಂಕ 11.10.2021 ಕ್ಕೂ ಮೊದಲು ನ್ಯಾಯಾಲಯಕ್ಕೆ 2 ರಿಂದ 3 ಬಾರಿ ಹಾಜರಾಗಿದ್ದೆ. ದಿನಾಂಕ 11.10.2021 ನಂತರ Misc 1/2021 ರ ಅರ್ಜಿಗೆ ಸಂಬಂಧಿಸಿದಂತೆ ವಕೀಲರನ್ನು 2 ರಿಂದ 3 ಬಾರಿ ಬೇಟಿಯಾಗಿದ್ದೆ. ನಮ್ಮ ವಕೀಲರ ಕಚೇರಿ ಚಿಕ್ಕಮಗಳೂರಿನಲ್ಲಿ ಇದೆ ಎಂದರೆ ಸರಿ.

5. ವಕೀಲರನ್ನು ಬೇಟಿ ಮಾಡಿ Misc 1/2021 ರ ಅರ್ಜಿಯಲ್ಲಿ ದಿನಾಂಕ 11.10.2021 ರ ನಂತರ ಏನೆಲ್ಲಾ ಆದೇಶ ಆಗಿದೆ ಎಂಬ ಬಗ್ಗೆ ತಿಳಿದುಕೊಂಡಿದ್ದೇನೆ. ದಿನಾಂಕ 30.05.2024 ರಂದು Misc 1/2021 ರ ಅರ್ಜಿಯಲ್ಲಿ ಏನು ಆದೇಶ ನ್ಯಾಯಾಲಯ ಮಾಡಿದೆ ಎಂದು ವಕೀಲರನ್ನು ಕೇಳಿ ತಿಳಿದುಕೊಂಡಿದ್ದೇನೆ. 30.05.2024 ರ ನಂತರ ಯಾವ ದಿನಾಂಕದಂದು ನ್ಯಾಯಾಲಯಕ್ಕೆ ಬರಬೇಕು ಎಂದು ನಮ್ಮ ವಕೀಲರು ತಿಳಿಸಿದ್ದರೂ ಎಂದು ನನಗೆ ನೆನಪಿಲ್ಲ. ದಿನಾಂಕ 29.07.2024 ರಂದು ನ್ಯಾಯಾಲಯಕ್ಕೆ ಹಾಜರಾಗಬೇಕು ಎಂದು ನಮ್ಮ ವಕೀಲರು ನನಗೆ ತಿಳಿಸಿದ್ದರೂ ಎಂದರೆ ಸರಿ. ಆದರೂ ಸಹ ನಾನು ಆ ದಿನಾಂಕದಂದು ನ್ಯಾಯಾಲಯಕ್ಕೆ ಬರಲಿಲ್ಲ ಎಂದರೆ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. Misc 1/2021 ರ ಆದೇಶದ ಪುಟಗಳು ಎಂದು ಸಾಕ್ಷಿಗೆ ಆದೇಶ ಪುಟಗಳ ದೃಢೀಕೃತ ನಕಲನ್ನು ತೋರಿಸಲಾಗಿ ಸಾಕ್ಷಿ ಗುರುತಿಸಿದ್ದರಿಂದ ಅದನ್ನು ನಿಡಿ-1 ಎಂದು ಗುರುತಿಸಲಾಯಿತು.

6. ದಿನಾಂಕ 29.07.2024 ರಂದು ತುಂಬಾ ಮಳೆ ಇದ್ದ ಕಾರಣ ನಾನು ನ್ಯಾಯಾಲಯಕ್ಕೆ ಹಾಜರಾಗಲು ಸಾದ್ಯವಾಗಲಿಲ್ಲ ಎಂದು ನಿಮ್ಮ ವಕೀಲರು ಹೇಳಿ ಕೊಟ್ಟ ಕಾರಣ ಆ ರೀತಿ ಹೇಳುತ್ತಿದ್ದೇನೆ ಎಂದರೆ ಸಾಕ್ಷಿ ಆ ಸಮಯದಲ್ಲಿ 5 ತಿಂಗಳ ಗರ್ಭವತಿ ಆಗಿದ್ದ ನನ್ನ ಸೊಸೆ ತೀರಿಕೊಂಡಿದ್ದರಿಂದ ನ್ಯಾಯಾಲಯಕ್ಕೆ ಹಾಜರಾಗಲಿಲ್ಲ ಎಂದು ನುಡಿಯುತ್ತಾರೆ. 5 ತಿಂಗಳ ಗರ್ಭವತಿ ಆಗಿದ್ದ ನನ್ನ ಸೊಸೆ ತೀರಿಕೊಂಡಿದ್ದರಿಂದ ನ್ಯಾಯಾಲಯಕ್ಕೆ ಹಾಜರಾಗಲಿಲ್ಲ ಎಂದು ನನ್ನ ಅರ್ಜಿಯಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ಹೇಳಿಲ್ಲ. ನನ್ನ ಸೊಸೆಯ ಮರಣ ಪ್ರಮಾಣ ಪತ್ರವನ್ನು ನಾನು ಹಾಜರುಪಡಿಸಿಲ್ಲ. 5 ತಿಂಗಳ ಗರ್ಭವತಿ ಆಗಿದ್ದ ನನ್ನ ಸೊಸೆ ತೀರಿಕೊಂಡಿದ್ದರಿಂದ ನ್ಯಾಯಾಲಯಕ್ಕೆ ಹಾಜರಾಗಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. Misc 1/2021 ನಾನು ಯಾವುದೇ ಸಕಾರಣ ಇಲ್ಲದೇ ಗೈರು ಹಾಜರಾದ ಕಾರಣ ವಜಾ ಆಗಿತ್ತು ಎಂದರೆ ಸರಿಯಲ್ಲ. ಸದರಿ ಅರ್ಜಿಯನ್ನು ಮತ್ತೊಮ್ಮೆ ವಿಚಾರಣೆಗೆ ತೆಗೆದುಕೊಳ್ಳಲು ಯಾವುದೇ ಸಕಾರಣಗಳನ್ನು ನಾನು ಈ ಅರ್ಜಿಯಲ್ಲಿ ನೀಡಿಲ್ಲ ಎಂದರೆ

ಸರಿಯಲ್ಲ. ಸದರಿ ಅರ್ಜಿಯನ್ನು ಮತ್ತೊಮ್ಮೆ ವಿಚಾರಣೆಗೆ ತೆಗೆದುಕೊಂಡರೆ ಎದುರುದಾರರಿಗೆ ತುಂಬಲಾರದ ನಷ್ಟ ಆಗುತ್ತದೆ ಎಂದರೆ ಸರಿಯಲ್ಲ. ನಾನು ಹಾಕಿದ ಅರ್ಜಿಯನ್ನು ವಜಾ ಮಾಡಿದರೆ ನನಗೆ ಯಾವುದೇ ತೊಂದರೆ ಆಗುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

Sd/-XX

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರಧನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

.